# ಪಾರಂಪರಿಕ ತತ್ವಪದಗಳ ಅನುಸರಣೆ ಮತ್ತು ಸಮಕಾಲೀನ ವಿಶ್ಲೇಷಣೆ

ಹೇಮಲತ ಜಿ.ಎಂ.

ಸಂಶೋಧನ ವಿದ್ಯಾರ್ಥಿನಿ, ಕನ್ನಡ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ.

DOI: https://doi.org/10.5281/zenodo.15795633

## ABSTRACT:

ತತ್ವಪದಕಾರರು ಅನುಭವದ ಚಳುವಳಿಯನ್ನು ಹುಟ್ಟುಹಾಕಿ ತಮ್ಮ ತತ್ವಪದಗಳ ರಚನೆಯ ಮೂಲಕ ಜೀವಂತವಾಗಿರಿಸಿದ್ದಾರೆ. ಅವರು ಸಂಚರಿಸಿದಲ್ಲೆಲ್ಲಾ ಅನುಭಾವದ ಹೊಳೆಯನ್ನೇ ಹರಿಸಿದ್ದಾರೆ. ತಮಗೆ ತಾವೇ ಗುರುವಾಗಿ, ಅರಿವಾಗಿ, ಗುರುವಿನ ಮಹತ್ವವನ್ನು ಸಾರುತ್ತಾ ಬಂದಿದ್ದಾರೆ. ಆಧ್ಯಾತ್ಮದ ಸಾಮರ್ಥ್ಯವನ್ನು ಸಿದ್ಧಿಸಿಕೊಂಡು ಬಹುಮುಖಿ ಚಿಂತನೆಯ ಪ್ರತೀಕದಂತೆ ಗೋಚರಿಸುತ್ತಾರೆ. ತತ್ವಪದಕಾರರಿಗೆ ನಾಥ, ಸಿದ್ಧ, ಆರೂಢ, ಅವಧೂತ, ಸೂಫಿ ಮೊದಲಾದ ಧಾರೆಗಳ ಪ್ರಭಾವ ಆಗಿರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ತತ್ವದ ಉದ್ದೇಶ ಅರಿವು ಅಥವಾ ವಿವೇಕವನ್ನು ನೀಡುವುದು. ಜಟಿಲವಾದ ಆಧ್ಯಾತ್ಮವನ್ನು ಸರಳೀಕರಣಗೊಳಿಸುವುದು ತತ್ವಪದಕಾರರ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ದೇವರು ಅಥವಾ ಪರಮಾತ್ಮನಿಗೆ ಸಂಬಂಧಿಸಿದ ಹದಗೊಂಡ ಸಿದ್ಧಾಂತವನ್ನು ಸುಂದರವಾದ ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎಂದು ಕರೆಯಲಾಗುತ್ತದೆ. ಆಧುನಿಕ ಸಮಾಜದಲ್ಲಿ ತತ್ವಪದಗಳು ಕೇವಲ ಭಕ್ತಿ ಮತ್ತು ತಾತ್ತ್ವಿಕ ವಿಚಾರಗಳನ್ನು ಮಾತ್ರವಲ್ಲದೆ, ಮೌಲ್ಯಮಾಪನ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಪ್ರೇರಕಶಕ್ತಿಯಾಗಿ ಮುಂದುವರಿಯುತ್ತಿವೆ. ತತ್ತ್ವಪದಗಳ ಮೂಲಕ ಜೀವನದ ನೈತಿಕ ಮೌಲ್ಯಗಳನ್ನು, ಸಹಜ ಶ್ರೇಣಿಭೇದ ವಿರೋಧವನ್ನು, ಸಮಾನತೆ ಮತ್ತು ಸತ್ಯಾಸತ್ಯತೆಯ ಪ್ರಭಾವವನ್ನು ವಿಶ್ಲೇಷಿಸಲು ಸಾಧ್ಯವಾಗಿದೆ. ನಾವು ಬಸವಣ್ಣನವರ, ಅಲ್ಲಮಪ್ರಭು, ಅಕ್ಕಮಹಾದೇವಿ ಹಾಗೂ ದಾಸಸಾಹಿತ್ಯದ ತತ್ವಪದಗಳನ್ನು ಆಧುನಿಕ ದೃಷ್ಟಿಕೋನದಿಂದ ನೋಡಿದರೆ, ಅವುಗಳು ತತ್ವಜ್ಞಾನ ಮತ್ತು ಸಾಮಾಜಿಕ ನಿಲುವುಗಳ ಹೊಸ ಅರ್ಥಗಳನ್ನು ನೀಡುತ್ತವೆ. ಉದಾಹರಣೆಗೆ, ಬಸವಣ್ಣನವರ "ಕಾಯಕವೇ ಕೈಲಾಸ" ಎಂಬ ತತ್ವಪದ ಇಂದು ಉದ್ಯೋಗನೀತಿ, ಶ್ರಮದ ಗೌರವ, ಮತ್ತು ಆರ್ಥಿಕ ಸ್ವಾವಲಂಬನೆಯ ತತ್ವವಾಗಿ ವ್ಯಾಖ್ಯಾನಿಸಲಾಗುತ್ತಿದೆ. ಆಧುನಿಕ ಕಾಲಘಟ್ಟದಲ್ಲಿ ತಂತ್ರಜ್ಞಾನ, ಮಾಧ್ಯಮ ಮತ್ತು ಸಾಮಾಜಿಕ ಚಿಂತನೆಗಳಲ್ಲಿ ಆದ ಬದಲಾವಣೆಗಳು ತತ್ವಪದಗಳ ಮೇಲೂ ಪರಿಣಾಮ ಬೀರಿವೆ. ಆದರೂ ಅವು ತಮ್ಮ ಮೂಲ ಸತ್ವವನ್ನು ಉಳಿಸಿಕೊಂಡು ಹೊಸ ಆಯಾಮಗಳನ್ನು ಪಡೆದುಕೊಂಡಿವೆ.

## KEYWORDS:

ತತ್ವಪದ, ಅನುಭಾವ, ಪರಮಾರ್ಥ, ಗುರುಶಿಷ್ಯರು, ಭಗವಂತ, ಆಧುನಿಕತೆ

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯದಷ್ಟೇ ಮೌಲಿಕ ಕೊಡುಗೆಯನ್ನು ತತ್ವಪದ ಸಾಹಿತ್ಯವೂ ನೀಡಿದೆ. ತತ್ವಪದ ಸಾಹಿತ್ಯದ ಮೂಲವು ಹನ್ನೆರಡನೆಯ ಶತಮಾನದಲ್ಲಿಯೇ ಉಗಮವಾಗಿ 15ನೇ ಶತಮಾನದಲ್ಲಿ ನಿಜಗುಣ ಶಿವಯೋಗಿಗಳಿಂದ ಪ್ರವರ್ಧಮಾನಕ್ಕೆ ಬಂದು 18-19ನೇ ಶತಮಾನಗಳಲ್ಲಿ ಉನ್ನತ ಹಂತವನ್ನು ತಲುಪಿತು. ಆದ್ದರಿಂದ ಈ ಕಾಲವನ್ನು ತತ್ವಪದಗಳ ಯುಗವೆಂದು ಹೇಳಲಾಗುತ್ತದೆ. ನಿರ್ದಿಷ್ಟ ವರ್ಗ-ವರ್ಣ-ಜಾತಿ-ಮತ-ಪಂಥಗಳಿಗೆ ಸೇರದೆ ಸರ್ವ ಮತ ಧರ್ಮಗಳಲ್ಲಿ ನಿರೂಪಿತವಾಗಿರುವ ಬ್ರಹ್ಮತತ್ವದ ಸಾರವನ್ನು ಹೀರಿ ಭಕ್ತಿ ಮಾರ್ಗದಲ್ಲಿ ನಡೆದ ಪರಮಾರ್ಥಕರು ಈ ತತ್ವಪದಕಾರರು. ಇಂತಹ ಸಾಹಿತ್ಯವು ಬಹುಕಾಲದವರೆಗೆ ವಿದ್ವಾಂಸರ, ಸಂಶೋಧಕರ ಮತ್ತು ಚರಿತ್ರೆಕಾರರ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ಈ ಸಾಹಿತ್ಯ ಪರಂಪರೆಯು ಇಂದು ಸಂಶೋಧಕರು ಮತ್ತು ಪಂಡಿತ-ಪಾಮರನ್ನೆಲ್ಲ ತನ್ನತ್ತ ಸೆಳೆಯುತ್ತಿದೆ. ತತ್ವಪದಕಾರರು ಅನುಭಾವದ ಚಳುವಳಿಯೊಂದನ್ನು ಹುಟ್ಟುಹಾಕಿ ತಮ್ಮ ತತ್ವಪದಗಳ ರಚನೆಯ ಮೂಲಕ ಜೀವಂತವಾಗಿರಿಸಿದ್ದಾರೆ. ಅವರ ಪದಗಳಲ್ಲಿ ಅಂತಃಕರಣದ ಪ್ರೀತಿಯಿದೆ, ಜೀವನದರ್ಶನವಿದೆ, ತಾತ್ವಿಕತೆಯಿದೆ, ಮಾರ್ಗದರ್ಶನವೂ ಇದೆ ಮತ್ತು ಏಕತಾರಿಯ ನಾದವೂ ಇದೆ. ತತ್ವಪದಕಾರರು ಸಂಚರಿಸಿದಲ್ಲೆಲ್ಲಾ ಅನುಭಾವದ ಪ್ರವಾಹವನ್ನೇ ಹರಿಸಿದ್ದಾರೆ. ಗುರು ಮನೆಯಿಂದ ಆರಂಭಿಸಿ ಗುಡಿಸಲಿನವರೆಗೂ ಮತ್ತು ಅರಿವಿನ ಮನೆಯವರೆಗೂ ಆ ವಿಸ್ತಾರವು ಬೆಳೆಯುತ್ತದೆ. ಅಸಂಖ್ಯಾತ ತತ್ವಪದಕಾರರು ಪೂರ್ವಸೂರಿಗಳಾದ ಶರಣರು, ದಾಸರು, ಅವಧೂತರು, ಆರೂಢರ ಧೋರಣೆಗಳನ್ನು ಅಲ್ಲಲ್ಲಿ ಅನುಸರಿಸುವಂತೆ ಕಂಡರೂ ಅವರು ತಮ್ಮದೇ ಆದ ವಿಶಿಷ್ಟವಾದ ಹಾದಿಯೊಂದನ್ನು ರೂಪಿಸಿಕೊಂಡರು. ಅದೇ 'ತತ್ವಪದ'ದ ಹಾದಿ. ಇವರು ದ್ವೈತ ಮತ್ತು ಅದ್ವೈತ ಧಾರೆಯನ್ನು ಪ್ರತಿಪಾದಿಸಿದರು. ತಮಗೆ ತಾವೇ ಗುರುವಾಗಿ, ಅರಿವಾಗಿ, ಗುರುವಿನ ಮಹತ್ವವನ್ನು ಸಾರುತ್ತಾ ಬಂದಿದ್ದಾರೆ. ಆಧ್ಯಾತ್ಮದ ಸಾಮರ್ಥ್ಯವನ್ನು ಸಿದ್ಧಿಸಿಕೊಂಡು ಬಹುಮುಖಿ ಚಿಂತನೆಯ ಪ್ರತೀಕದಂತೆ ಗೋಚರಿಸುತ್ತಾರೆ. ಹೀಗೆ ಹಲವು ಆಯಾಮಗಳಲ್ಲಿ ತಮ್ಮ ಸಾಧನೆಯನ್ನು ತೋರುತ್ತಾ ಭಕ್ತಿ, ಆಧ್ಯಾತ್ಮ, ಅನುಭಾವ ಚಿಂತನೆಯ ರೂವಾರಿಗಳಾಗಿ ಕಂಡುಬರುತ್ತಾರೆ. ತತ್ವಪದಕಾರರ ಜೀವನಶೈಲಿ ಜಾನಪದೀಯವಾದುದು. ಅವರು ಶಿಷ್ಟರಂತೆ ವೇಷಭೂಷಣ ತೊಡುವುದು, ಮಾತಿನಲ್ಲಿ ಮೃದುತ್ವ ಸಾಧಿಸುವುದರ ಜೊತೆಗೆ ಒಂದೇ ಕಡೆ ಸ್ಥಿರವಾಗಿರದೆ ನಿರಂತರವಾಗಿ ಚಲಿಸುವ ಜಂಗಮ ಸ್ವರೂಪಿಗಳಾಗಿದ್ದಾರೆ. ತತ್ವಪದಕಾರರು ಸಾಂಸ್ಕೃತಿಕ ಸಮನ್ವಯತೆಯನ್ನು ಸಾಧಿಸುವ ಹೊಣೆ ಹೊತ್ತು ನುಡಿದಂತೆ ನಡೆದು ಪಾಮರರ ಬದುಕನ್ನು ಪಾರಮಾರ್ಥದ ಕಡೆಗೆ ಕೊಂಡೊಯ್ದು ಬದುಕನ್ನು ಹಸನುಗೊಳಿಸಿದ್ದಾರೆ. ಧರ್ಮ, ಭಾಷೆ, ಪ್ರಾದೇಶಿಕತೆ, ಜಾತಿ, ಮತ, ಕುಲ, ಗೋತ್ರ, ಮೂಢನಂಬಿಕೆ, ಅಂಧಶ್ರದ್ಧೆಗಳಿಂದ ಜನರನ್ನು ಮುಕ್ತರನ್ನಾಗಿಸಲು ಶ್ರಮಿಸಿ

ಸಮಾನತೆಯನ್ನು ಸಾಧಿಸಿದ್ದಾರೆ. ಈ ತತ್ವಪದದ ವ್ಯಾಪ್ತಿಯು ಆತ್ಮಜ್ಞಾನದಿಂದ ಮೊದಲ್ಗೊಂಡು ಬ್ರಹ್ಮಜ್ಞಾನದ ಹಂತದವರೆಗೆ ಹಬ್ಬಿದೆ. ಸಾಧಕರು, ಸಿದ್ಧರು, ಯೋಗಿಗಳು, ಅನುಭಾವಿಗಳು, ದಾರ್ಶನಿಕರು ತಮ್ಮದೇ ಆದ ಸಿದ್ಧಾಂತಗಳ ಹಿನ್ನೆಲೆಯಲ್ಲಿ ತಾವು ಕಂಡ ಅನುಭಾವದ ನೆಲೆಯನ್ನು ಜೀವನ ದರ್ಶನವನ್ನು ತತ್ವಪದಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಇವರದ್ದು ಸಮಾಜ ಸುಧಾರಣಾ ಮಾರ್ಗ. ತತ್ವಪದಕಾರರ ಪ್ರಮುಖ ಉದ್ದೇಶ ಆತ್ಮೋದ್ಧಾರ. ತತ್ವಪದಕಾರರಿಗೆ ನಾಥ, ಸಿದ್ಧ, ಆರೂಢ, ಅವಧೂತ, ಸೂಫಿ ಮೊದಲಾದ ಧಾರೆಗಳ ಪ್ರಭಾವ ಆಗಿರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ತತ್ವದ ಉದ್ದೇಶ ಅರಿವು ಅಥವಾ ವಿವೇಕವನ್ನು ನೀಡುವುದು. ಜಟಿಲವಾದ ಆಧ್ಯಾತ್ಮವನ್ನು ಸರಳೀಕರಣಗೊಳಿಸುವುದೇ ತತ್ವಪದಕಾರರ ಆಶಯವಾಗಿದೆ.

ತತ್ವಪದದ ಅರ್ಥವನ್ನು ನೋಡುವುದಾದರೆ "ತತ್ವ ಎಂದರೆ ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿ ಎಂದರ್ಥವಾಗುತ್ತದೆ. ತತ್ವಜ್ಞಾನವನ್ನು ಬ್ರಹ್ಮಜ್ಞಾನವೆಂದು ಕರೆಯಲಾಗಿದೆ. 'ಪದ' ಎಂಬುದನ್ನು 'ಹಾಡು', 'ಹದಗೊಂಡ ಶಬ್ದ' ಎಂದು ಅರ್ಥವಾಗುತ್ತದೆ. ದೈವಕ್ಕೆ ಸಂಬಂಧಿಸಿದ ತತ್ವವನ್ನು ಲಯದ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುತ್ತಾರೆ. 'ತತ್ವಪದ'ದಲ್ಲಿ ತತ್ವ ಮತ್ತು ಪದ ಇವೆರಡಕ್ಕೂ ಅರ್ಥಪೂರ್ಣವಾದ ಸಂಬಂಧವಿದೆ. 'ತತ್ವ' ವಸ್ತುವಾದರೆ, 'ಪದ' ಅಭಿವ್ಯಕ್ತಿ ಮಾಧ್ಯಮವಾಗಿದೆ."[1] ತತ್ವಪದ ಸಾಹಿತ್ಯವು ಅವೈದಿಕ ಪಂಥದ ಸಾಧಕರಿಂದ ರಚನೆಯಾದ ಗೇಯಾತ್ಮಕ ಗೀತೆಗಳಾಗಿವೆ. ಹೀಗಾಗಿ ಯಾವುದೇ ಧಾರ್ಮಿಕ ಅಥವಾ ಅನುಭಾವಿಕ ಸಿದ್ಧಾಂತಗಳನ್ನು ಹಾಡಿನ ಮೂಲಕ ವ್ಯಕ್ತಪಡಿಸುವ ಒಂದು ಕ್ರಮವೇ ತತ್ವಪದಗಳೆನಿಸುತ್ತವೆ. ಭಕ್ತಿ, ಆಧ್ಯಾತ್ಮ, ಧ್ಯಾನ, ಜ್ಞಾನ, ನೀತಿ, ಯೋಗ, ಅನುಭಾವ, ವೈರಾಗ್ಯ, ಸಮಾಜ ವಿಮರ್ಶೆಯಂಥ ವಿಷಯಗಳನ್ನು ಒಳಗೊಂಡು ಆಯಾ ಕಾಲದ ಸಂದರ್ಭ, ಕವಿಗಳ ಮನೋಧರ್ಮ ಮತ್ತು ಅನುಭಾವಿಕ ನಿಲುವನ್ನು ಹಿನ್ನಲೆಯಾಗಿಟ್ಟುಕೊಂಡು ರಚನೆಯಾದ ತತ್ವಪದಗಳು ಇಂದು ಅನೇಕ ಹೆಸರುಗಳಿಂದ ಜನಪ್ರಿಯತೆ ಗಳಿಸಿವೆ. ಅವುಗಳೆಂದರೆ 'ಸ್ವರವಚನ', 'ಕೈವಲ್ಯಪದ', 'ಅನುಭಾವ ಸಾಹಿತ್ಯ', 'ಭಜನಾ ಪದಗಳು', 'ಏಕತಾರಿಯ ಪದಗಳು', 'ಗುರುಶಿಷ್ಯರ ಪದಗಳು' ಮೊದಲಾದ ಪರ್ಯಾಯ ನಾಮಗಳನ್ನು ಹೊಂದಿದ ತತ್ವಪದವು ಇವೆಲ್ಲವನ್ನು ಒಳಗೊಳ್ಳುತ್ತದೆ.

ತೊಂಬತ್ತರ ದಶಕದ ಆರಂಭದಲ್ಲಿ ಬಂಡಾಯ ದಲಿತ ಸಾಹಿತ್ಯ ಚಳುವಳಿ ಕ್ಷೀಣಿಸುತ್ತಿದ್ದಂತೆ, ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಪ್ರಬಲವಾಗತೊಡಗಿದವು. ಏಕರೂಪದ ಧರ್ಮ ಮತ್ತು ಸಂಸ್ಕೃತಿಯನ್ನು ಪ್ರತಿಪಾದಿಸುವ ಶಕ್ತಿಗಳು ಅಧಿಕಾರಕ್ಕೆ ಬಂದವು. ಈ ಸಂದರ್ಭದಲ್ಲಿ, ಶಿಕ್ಷಣದಿಂದ

ಜಾಗೃತಗೊಂಡ ಸಮಾಜದ ಅಂಚಿನ ಸಮುದಾಯಗಳಿಗೆ ಏಕರೂಪಿ ಸಂಸ್ಕೃತಿಯನ್ನು ತಡೆಯಲು ಕೇವಲ ವಚನ ಸಾಹಿತ್ಯದ ನೆರವು ಸಾಕಾಗಲಿಲ್ಲ. ಹೀಗಾಗಿ, ಜಾತ್ಯಾತೀತ ಮತ್ತು ಸಮಾಜದ ಅಂಚಿನ ಸಮುದಾಯಗಳ ಬಹುರೂಪಿ ಸಂಸ್ಕೃತಿಯನ್ನು ಪ್ರತಿನಿಧಿಸುವ ತತ್ವಪದ ಸಾಹಿತ್ಯವನ್ನು ಮುನ್ನೆಲೆಗೆ ತರಲಾಯಿತು. ಕೆಳ ಸಮುದಾಯಗಳು ಮತ್ತು ಅಲಕ್ಷಿತ ಸಮುದಾಯಗಳ ಬಹುಸಂಸ್ಕೃತಿಯ ತತ್ವ ಹಾಗೂ ಮೌಲ್ಯಗಳನ್ನು ಬಿಂಬಿಸಲು ತತ್ವಪದ ಸಾಹಿತ್ಯವು ಅಧ್ಯಯನಕ್ಕೆ ಬಳಕೆಯಾಯಿತು. ವಚನ ಮತ್ತು ಕೀರ್ತನೆಗಳ ರಚನೆ ಒಂದು ಕಾಲಕ್ಕೆ ನಿಂತುಹೋದರೂ, ತತ್ವಪದಗಳ ರಚನೆ ಇಂದಿಗೂ ಮುಂದುವರಿಯುತ್ತಿರುವುದು ಗಮನಾರ್ಹ ಅಂಶವಾಗಿದೆ. ಇಂದಿಗೂ ಕರ್ನಾಟಕದ ಅನೇಕ ಭಾಗಗಳಲ್ಲಿ ತತ್ವಪದ ಸಾಹಿತ್ಯದ ಪರಂಪರೆಯು ಮುಂದುವರೆದಿದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಭಾಗದಲ್ಲಿ ತತ್ವಪದಕಾರರು ಹಾಗೂ ಅವರ ಶಿಷ್ಯರ ನೂರಾರು ಗದ್ದಿಗೆಗಳಿವೆ. ಅವರ ಗದ್ದಿಗೆ ಜಯಂತಿ, ಪುಣ್ಯತಿಥಿ, ಗುರು ಬೋಧ ಕಾರ್ಯಕ್ರಮ, ಜಾತ್ರೆಗಳು ನಡೆಯುತ್ತವೆ. ಇಂದಿಗೂ ತತ್ವಪದಗಳು ಹಾಡುವ ಗಾಯಕರಿದ್ದಾರೆ ಮತ್ತು ಭಜನಾ ತಂಡಗಳಿವೆ.

ತತ್ವಪದಕಾರರು ಗುರುವಿಗೆ ಮಹತ್ವದ ಸ್ಥಾನ ನೀಡುತ್ತಾರೆ. ಗುರು ಮುಖೇನ ತತ್ವಪದ ರಚನೆಯ ಮಾರ್ಗವನ್ನು ತಿಳಿದುಕೊಳ್ಳುತ್ತಾರೆ. ಅವರ ತತ್ವಪದಗಳಿಗೆ ಗುರುವಿನ ಹೆಸರನ್ನು ಅಂಕಿತನಾಮವಾಗಿ ಬಳಸುತ್ತಾರೆ. ಗುರುವಿನಿಂದ ದೀಕ್ಷೆ ಪಡೆದ ತತ್ವಪದಕಾರರು ಊರಿನ ದೇವಸ್ಥಾನ, ದೇವರ ಕಟ್ಟೆಯ ಮೇಲೆ ಅಮಾವಾಸ್ಯೆ, ಹುಣ್ಣಿಮೆ, ಹಬ್ಬ-ಹರಿದಿನಗಳಲ್ಲಿ ಒಟ್ಟಿಗೆ ಸೇರಿ ತತ್ವಪದಗಳನ್ನು ಹಾಡುತ್ತಾರೆ. ಈ ಅನುಭಾವಿ ಪಂಥಗಳಲ್ಲಿ ಹಿಂದೂಗಳಿಗೆ ಮುಸ್ಲಿಂ ಹಾಗೂ ಮುಸ್ಲಿಂರಿಗೆ ಹಿಂದೂಗಳು ಗುರುಗಳಾದರು. ಮುಸ್ಲಿಂರಾದ ಶಿಶುನಾಳ ಶರೀಫರಿಗೆ ಗುರುಗೋವಿಂದಭಟ್ಟರು, ಚೆನ್ನೂರ ಜಲಾಲಸಾಹೇಬರಿಗೆ ಕಡಕೋಳ ಮಡಿವಾಳಪ್ಪ, ನಾಗಲಿಂಗಸ್ವಾಮಿಗಳಿಗೆ ಹುಸೇನ ಪೀರರು, ಚಲವಾದಿ ಚಂದಪ್ಪನಿಗೆ ಶಿಶುನಾಳ ಶರೀಫರು ಗುರುವಾದಂತೆ ಮುಂತಾದ ಗುರುಶಿಷ್ಯ ಪರಂಪರೆಯು ಬೆಳೆದುಬಂದಿದೆ. ತತ್ವಪದಕಾರರಿಗೆ ಸಂಸಾರ ನಿಷಿದ್ಧವಲ್ಲ. ಸಂಸಾರದೊಳಗಿದ್ದೇ ಅನುಭಾವ ಪಂಥದಲ್ಲಿ ಸಾಗಿ ಪರಮಾರ್ಥವನ್ನು ಕಂಡುಕೊಂಡರು. ಉದಾ: ಶಿಶುನಾಳ ಶರೀಫ, ವಡಕಿ ತಾತಪ್ಪ, ಹೊಸೂರು ತಿಪ್ಪಣ್ಣ, ಚಲವಾದಿ ಚಂದಪ್ಪ ಮೊದಲಾದವರು ಸಂಸಾರದೊಳಗಿದ್ದೇ ಪರಮಾರ್ಥವನ್ನು ಕಂಡುಕೊಂಡಿದ್ದಾರೆ. ಇನ್ನೂ ಕೆಲ ತತ್ವಪದಕಾರರು ಹೆಣ್ಣು, ಹೊನ್ನು, ಮಣ್ಣು ಇವುಗಳನ್ನು 'ಮಾಯೆ' ಎಂದು ಕರೆದರು. ಕಾರಣ ಆಧ್ಯಾತ್ಮ ಸಾಧನೆ ಮಾಡಲು ವೈರಾಗ್ಯ ಅಗತ್ಯ, ಸಂಸಾರದಲ್ಲಿ ಇದ್ದು ಶಾಶ್ವತವಾದ ಸುಖವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲವೆಂದು ಸಂಸಾರವನ್ನು ತ್ಯಜಿಸಿ ಅನುಭಾವಿಗಳಾಗಿದ್ದಾರೆ. ಉದಾ: ನಿಜಗುಣ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿ, ಕಡಕೋಳ ಮಡಿವಾಳಪ್ಪ

ಮುಂತಾದವರು. ತತ್ವಪದಕಾರರಲ್ಲಿ ಅನೇಕರು ವಿದ್ಯಾಭ್ಯಾಸ ಮಾಡಿದವರಲ್ಲ. ಅನಕ್ಷರಸ್ಥರಾದರೂ ಗುರುವಿನಿಂದ ದೀಕ್ಷೆ ಪಡೆದು ನಿರಂತರ ಪರಿಶ್ರಮದ ಮೂಲಕ ಅನುಭಾವವನ್ನು ಪಡೆದುಕೊಂಡರು. ಇವರೆಲ್ಲ ಕಾವ್ಯಗಳನ್ನು ಓದಿದವರಲ್ಲ, ಆದರೆ ತಕ್ಷಣ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ಅವರಿಗೆ ಬೇಕಾದ ವಸ್ತು ವಿಷಯ ಸಿಕ್ಕರೆ ಸಾಕು ಅದು ಹಾಡಾಗುತ್ತಿತ್ತು. ಭೌತಿಕವಾಗಿ ಬಡತನದ ಬವಣೆಯಲ್ಲಿ ಬದುಕಿ ಮೌಖಿಕವಾದ ತತ್ವಪದಗಳ ರಚನೆ ಮಾಡಿದ್ದಾರೆ. ಯಾವಾಗ ಬೇಕೋ ಆವಾಗ ಅವರು ಹಾಡುಗಳನ್ನು ಕಟ್ಟಲಾರರು. ಅವರ ಮನಸ್ಸು ಸಮ್ಮತಿಸಿದಾಗ ಮಾತ್ರ ಹಾಡುಗಳ ರಚನೆಯಲ್ಲಿ ತೊಡಗುತ್ತಿದ್ದರು. ತಮ್ಮಿಷ್ಟಕ್ಕೇ ತಾವೇ ಹಾಡಿಕೊಂಡು ತತ್ವಪದವನ್ನು ಹಾಡುತ್ತಿದ್ದರು. ಅವರು ಹಾಡುಗಳನ್ನು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಸಂದರ್ಭಕ್ಕೆ ತಕ್ಕಂತೆ ಹಾಡುತ್ತಾರೆ. ತತ್ವಪದಕಾರರು ಎಲ್ಲ ಸಮಾಜದ ಜನರೊಂದಿಗೆ ಬೆರೆತು ಅವರಲ್ಲಿರುವ ಅಂಧಕಾರವನ್ನು ಹೋಗಲಾಡಿಸಿದರು. ಮುಟ್ಟು-ಮೈಲಿಗೆ, ಹೆಣ್ಣು-ಗಂಡು, ಬಡವ-ಶ್ರೀಮಂತ ಎಂಬ ತಾರತಮ್ಯವನ್ನು ನಿರಾಕರಿಸಿದವರು. ನಾಡಿನಾದ್ಯಂತ ತತ್ವಪದಕಾರರ ಗದ್ದುಗೆ-ಮಠಗಳಿವೆ. ಇವರ ಜಯಂತಿ, ಪುಣ್ಯತಿಥಿ, ಜಾತ್ರೆಗಳಲ್ಲಿ ಸರ್ವಧರ್ಮದ ಜನರು ಸೇರಿ ಆಚರಿಸುತ್ತಾರೆ. ಇದು ತತ್ವಪದಕಾರರ ಸಂಸ್ಕೃತಿಯಾಗಿದೆ. ತತ್ವಪದಕಾರರು ಲೌಕಿಕ ಜೀವನದ ಸಂಕೀರ್ಣತೆಯಲ್ಲಿ ಜನಸಾಮಾನ್ಯರ ಎದೆಯಲ್ಲಿ ಅನುಭಾವದ ಸಾರವನ್ನು ಬಿತ್ತಿದರು. ಅಮೂರ್ತ ರೂಪದ 'ಅರಿವೇ ಗುರು' ಎಂಬ ತಾತ್ವಿಕ ಎಚ್ಚರವನ್ನು ನೀಡಿದವರು. ಸಾಮಾಜಿಕ ಸಂದರ್ಭದಲ್ಲಿ ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಧರ್ಮಗಳು ಒಂದನ್ನೊಂದು ವಿರೋಧಿಸಿ ಬೆಳೆಯುವ ಕಾಲದಲ್ಲಿ, ಸಾಮಾಜಿಕ ಸಾಮರಸ್ಯವನ್ನು ಕಾಪಾಡಿಕೊಂಡು ಬಂದು, ಜೀವನಿಷ್ಠವಾದ ಆಚರಣೆಗಳಿಗೆ ಹಂಬಲಿಸಿದವರು ಈ ತತ್ವಪದಕಾರರು. ಶರಣರ ವಚನಗಳಂತೆ ಮತ್ತು ದಾಸರ ಕೀರ್ತನೆಗಳಂತೆ, ಅನುಭಾವಿಗಳ ತತ್ವಪದಗಳು ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಪ್ರಕಾರವಾಗಿ ಬೆಳೆದು ಜನಪ್ರಿಯವಾಗಿವೆ ಎಂಬುದಕ್ಕೆ ಆ ತತ್ವಪದಗಳೇ ಸಾಕ್ಷಿ. ಅವು ಸರಳ ಹಾಗೂ ಜನರು ದಿನನಿತ್ಯ ಬಳಸುವ ಭಾಷೆಯಲ್ಲಿವೆ ಎಂದು ಹೇಳಬಹುದು. ಪರಮಾತ್ಮನ ಕುರಿತಾದ ಶ್ರದ್ಧೆ, ನಂಬಿಕೆ, ಭಕ್ತಿ, ಧ್ಯಾನ ಮತ್ತು ಚಿಂತನೆಗಳು ಈ ತತ್ವಪದಗಳ ಮೂಲಕ ವ್ಯಕ್ತವಾಗಿವೆ. ಹೀಗಾಗಿ, ಇವುಗಳನ್ನು ಅನುಭಾವ ಪದಗಳೆಂದೂ ಕರೆಯಲಾಗುತ್ತದೆ.

"ವಚನಕಾರರನ್ನು ಕೀರ್ತನಕಾರರನ್ನು ಅನುಭಾವಿ ಕವಿಗಳೆಂದು ಕರೆದಿಲ್ಲ. ಆದರೆ ವಚನ ಕೀರ್ತನೆಗಳಲ್ಲಿ ಅನುಭಾವ ತುಂಬಿದೆ. ಇಲ್ಲಿ ತತ್ವಪದ ರಚನಾಕಾರರನ್ನು ಮಾತ್ರ ಅನುಭಾವಿಗಳೆಂದು ಕರೆಯಲಾಗಿದೆ."[2] ಏಕೆಂದರೆ ತತ್ವಪದಕ್ಕೂ ಅನುಭಾವಕ್ಕೂ ಅವಿನಾಭಾವ ಸಂಬಂಧವಿದೆ. ಅನುಭಾವವಿಲ್ಲದ ತತ್ವಪದಗಳು ಬಹಳ ವಿರಳವೆಂದೇ ಹೇಳಬಹುದು. ಇಲ್ಲಿ ಕಂಡುಬರುವ ತತ್ವ ಸಿದ್ಧಾಂತಗಳು ಆಧ್ಯಾತ್ಮ ವಿದ್ಯೆ ಮತ್ತು

ಅರಿವಿನಿಂದ ಕೂಡಿದ್ದು, ಅನುಭವದ ಮೂಲಕ ಹುಟ್ಟಿ ಅನುಭಾವದ ಮೂಲಕ ವ್ಯಕ್ತವಾಗುತ್ತವೆ. ತತ್ವಪದಗಳಲ್ಲಿನ ಆಧ್ಯಾತ್ಮವು ಧಾರ್ಮಿಕ ನೆಲೆಯಲ್ಲಿ ಅಲೌಕಿಕ ಜೀವನದ ಅನುಭವಗಳನ್ನು ತಿಳಿಸಿದರೆ, ಅನುಭಾವವು ನೈತಿಕ ನೆಲೆಯಲ್ಲಿ ಲೌಕಿಕ ಜೀವನದ ಅನುಭವಗಳನ್ನು ಕಟ್ಟಿಕೊಡುತ್ತದೆ. ತತ್ವಪದ ಸಾಹಿತ್ಯದಲ್ಲಿ ಸಾಂಸ್ಕೃತಿಕ ಏಕತೆಯನ್ನು ಸಾರುವ ಅನೇಕ ಮುಸ್ಲಿಂ ತತ್ವಪದಕಾರರಿದ್ದಾರೆ. ಅವರು ಇಂದಿನ ಸಂಸ್ಕೃತಿಯ ಭಾಗವಾಗಿರುವ ದೇವತೆಗಳನ್ನು ಆಚರಣಾತ್ಮಕವಾಗಿ ಸ್ತುತಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ: ಶಿಶುನಾಳ ಶರೀಫರು ದ್ಯಾಮವ್ವನ ಸ್ತುತಿ, ಆಂಜನೇಯನ ದಂಡಕ, ಎಲ್ಲಮ್ಮನ ಜಾತ್ರೆ, ನಾಗರ ಪಂಚಮಿ, ಅಲ್ಲಿಕೇರಿ, ಶೀಗೆ ಹುಣ್ಣಿಮೆ ಮತ್ತು ಗುಗ್ಗಳ ಸಂಪ್ರದಾಯ ಮುಂತಾದ ಆಚರಣೆಗಳ ಕುರಿತು ಹಾಡಿದ್ದಾರೆ.

**"ಕುಂಬಾರಕಿ ಈಕಿ ಕುಂಬಾರಕಿ ಈ**
**ಬ್ರಹ್ಮಾಂಡವೆಲ್ಲ ತುಂಬಿಕೊಂಡಿರುವ. ॥ಪ॥**
**ಚಿನ್ನ ಎಂಬುವ ಮಣ್ಣನು ತರಿಸಿ**
**ತನು ಎಂಬುವ ನೀರನು ಹಣಿಸಿ**
**ಮನ ಎಂಬುವ ಹುದಲನು ಕಲಸಿ**
**ಗುಣ ಎಂಬುವ ಸೂರನು ಹಾಕಿ ॥1॥**
**ಮೂರು ಕಾಸಿಗೊಂದು ಕುಡಿಕೆಯ ಮಾರಿ**
**ಆರು ಕಾಸಿಗೊಂದು ಗಡಿಗೆಯ ಮಾರಿ**
**ವಸಧೆಯೊಳು ಶಿಶುನಾಳಧೀಶ ಮುಂದೆ**
**ಧ್ಯಾನದ ಮಗೆಯೊಂದು ಇಡುವಾಕಿ"[3]**

ಈ ತತ್ವಪದದಲ್ಲಿ, ಶರೀಫರು ಮಣ್ಣನ್ನು ಶೋಧಿಸಿ ತಂದು, ನೀರು ಸಿಂಪಡಿಸಿ, ಕೆಸರನ್ನು ಕಲಸಿ, ಆಶ್ರಯವನ್ನು ನಿರ್ಮಿಸಿ, ತಿಗರಿಯನ್ನು ತಯಾರಿಸಿ, ಬಡಿಗೆಯನ್ನು ಊರಿ, ತಿರುಗಿಸಿ ಮಡಿಕೆ, ಕುಡಿಕೆ ಮತ್ತು ಗಡಿಗೆಗಳನ್ನು ರೂಪಿಸಿ, ಅವುಗಳನ್ನು ಸರಿಯಾಗಿ ಸುಟ್ಟು ಗಟ್ಟಿಮಾಡಿ ಮಾರುಕಟ್ಟೆಗೆ ಕೊಂಡೊಯ್ದು ಮಾರಾಟ ಮಾಡುವವರೆಗಿನ ಸಂಪೂರ್ಣ ಪ್ರಕ್ರಿಯೆಯನ್ನು ವಿವರಿಸಿದ್ದಾರೆ. ಸಾಮಾನ್ಯ ಮನುಷ್ಯ ಜ್ಞಾನದ ಮನುಷ್ಯನಾಗಿ ಬದಲಾಗುವ ರೀತಿ ಅದ್ಭುತವಾಗಿದೆ. ಶರೀಫರ ಈ ತತ್ವಪದವು ಸಂಪೂರ್ಣವಾಗಿ ಪಾರಮಾರ್ಥಿಕ ಜ್ಞಾನಕ್ಕೆ ಸಂಬಂಧಿಸಿದೆ. ಶರೀಫರ ದೃಷ್ಟಿಯಲ್ಲಿ 'ಕುಂಬಾರಕಿ' ಎಂದರೆ ಸೃಷ್ಟಿಗೆ ಮೂಲ ಕಾರಣಳಾದ ಆದಿಶಕ್ತಿಯೇ ಆಗಿದ್ದಾಳೆ. ಇಲ್ಲಿ 'ಚಿನ್ನ' ಎಂದರೆ ಪರಿಶುದ್ಧವಾದ ಭಾವ. ಬಸವಾನಂದ ಸ್ವಾಮಿಗಳು ಆ ಪರಿಶುದ್ಧ ಭಾವವನ್ನು ಬಹಳ ಆಸಕ್ತಿದಾಯಕವಾಗಿ ವಿಶ್ಲೇಷಿಸಿದ್ದಾರೆ. ಮುಕ್ತ ಜೀವಿಗಳನ್ನು ಸೃಷ್ಟಿಸಲು ಬೇಕಾಗಿರುವುದು ಶುದ್ಧ ಭಾವ. ಆ ಶುದ್ಧ ಭಾವವನ್ನೇ ಮಣ್ಣನ್ನಾಗಿ ಮಾಡಿ, ದೇಹವನ್ನು ನೀರಿನಂತೆ ಬಳಸಿ, ಮನಸ್ಸನ್ನು ಕೆಸರಿನಂತೆ ತುಳಿದು, ಸದ್ಗುಣಗಳ ಆಶ್ರಯವನ್ನು ನಿರ್ಮಿಸಿ ಮುಕ್ತಿ ಜೀವಿಗಳೆಂಬ ಮಡಿಕೆಯನ್ನು ಆ ಆದಿಶಕ್ತಿ 'ಕುಂಬಾರ ತಾಯಿ' ತಯಾರಿಸುತ್ತಾಳೆ ಎಂದು ಅವರು ವಿವರಿಸಿದ್ದಾರೆ. ಭಗವಂತನಲ್ಲಿಟ್ಟಿರುವ

ಅಪಾರವಾದ ಭಕ್ತಿಯೇ ಚಕ್ರವಾಗಿ, ಧ್ಯಾನವೆಂಬ ಬಡಿಗೆಯನ್ನು ನೆಟ್ಟು ಪ್ರತಿನಿತ್ಯ ಸಾಧನೆ ಮಾಡುವುದೇ 360 ಸುತ್ತುಗಳಾಗಿ ಮುಕ್ತ ಜೀವನದ ಗಡಿಗೆಯನ್ನು ತಯಾರು ಮಾಡುತ್ತಾಳೆ. ಶರಣರ ಮಾರ್ಗವನ್ನು ಅನುಸರಿಸಿದ ಶರೀಫರು, ಅನ್ನಕ್ಕಾಗಿ ಇತರರನ್ನು ಅವಲಂಬಿಸುವುದನ್ನು ನಿರಾಕರಿಸಿ, ಪ್ರತಿಯೊಬ್ಬರೂ ದುಡಿದು ತಮ್ಮ ಹೊಟ್ಟೆ ತುಂಬಿಸಿಕೊಳ್ಳಬೇಕೆಂದು ಪ್ರತಿಪಾದಿಸಿದ್ದಾರೆ.

**ಆಧುನಿಕ ವಿಶ್ಲೇಷಣೆ:**

ತತ್ವಪದಕಾರರು ಒಂದು ನಿರ್ದಿಷ್ಟ ಪ್ರದೇಶದ ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಹಾಗೂ ಸಾಮಾಜಿಕ ವಲಯದಲ್ಲಿ ಸಂಭವಿಸುವ ಬದಲಾವಣೆಗಳನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ನೇರವಾಗಿ ಮತ್ತು ಸ್ಪಷ್ಟವಾಗಿ ತಮ್ಮ ಕಾವ್ಯಗಳಲ್ಲಿ ಚಿತ್ರಿಸಿದ್ದಾರೆ. ಆ ಬದಲಾವಣೆಗಳ ಅರಿವು ಮತ್ತು ಅವುಗಳ ಪರಿಣಾಮಗಳನ್ನು ತಮ್ಮ ಪದಗಳಲ್ಲಿ ವಿಡಂಬನಾತ್ಮಕವಾಗಿ ವ್ಯಕ್ತಪಡಿಸಿದ್ದಾರೆ. ಮಧ್ಯಕಾಲೀನ ಯುಗದಲ್ಲಿ ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಆಗಮಿಸಿದ ಡಚ್ಚರು, ಫ್ರೆಂಚರು, ಪೋರ್ಚುಗೀಸರು ಮತ್ತು ಬ್ರಿಟಿಷರು ಇಲ್ಲಿ ಆಡಳಿತ ಸ್ಥಾಪಿಸಲು ತೀವ್ರ ಪೈಪೋಟಿ ನಡೆಸಿದರು. ಭಾರತೀಯ ರಾಜರುಗಳ ದೌರ್ಬಲ್ಯವನ್ನು ಅರಿತ ಬ್ರಿಟಿಷರು ಒಡೆದು ಆಳುವ ನೀತಿಯನ್ನು ಅನುಸರಿಸಿದರು. ಈ ತಂತ್ರದ ಮೂಲಕ ಅವರು ಪ್ರಬಲ ರಾಜ್ಯಗಳನ್ನು ಸೋಲಿಸಿ ರಾಜಕೀಯ ಶಕ್ತಿಯಾಗಿ ಬೆಳೆದರು. ಇದರೊಂದಿಗೆ ಯಂತ್ರ ನಾಗರಿಕತೆಯು ಭಾರತವನ್ನು ಪ್ರವೇಶಿಸಿತು ಮತ್ತು ಹೊಸ ಬಗೆಯ ಆಧುನಿಕತೆಯು ವೇಗವಾಗಿ ಬೆಳೆಯಲು ಪ್ರಾರಂಭಿಸಿತು. 18ನೇ ಶತಮಾನದಿಂದ ನಿಜಾಮರ ಆಳ್ವಿಕೆ ಪ್ರಾರಂಭವಾದ ಮೇಲೆ 19ನೇ ಶತಮಾನದಿಂದ ಫಾರಸಿ ಬದಲು ಉರ್ದು ಭಾಷೆ ಆಡಳಿತದಲ್ಲಿ ಮತ್ತು ಶಿಕ್ಷಣದಲ್ಲಿ ಪ್ರಭುತ್ವದ ಬೆಂಬಲದಿಂದ ಪ್ರವೇಶಿಸಿತು. ಇದರಿಂದ ಉರ್ದುಭಾಷೆ ವ್ಯವಹಾರದಲ್ಲಿಯೂ ಪ್ರಬಲವಾಗಿ ಸೇರಿಕೊಂಡಿತು. ಬ್ರಿಟಿಷರಿಂದ 'ಆಧುನಿಕತೆ' ಕಾಲಿಟ್ಟ ನಂತರ ಇಂಗ್ಲೀಷ್ ಭಾಷೆಯಿಂದ ಪಾಶ್ಚಾತ್ಯ ಜ್ಞಾನವು ಈ ನಾಡಿಗೆ ಬಂದು ಹೊಸ ಬಗೆಯ ಸಾಹಿತ್ಯ ಮೂಡಿ 'ಆಧುನಿಕ ಸಾಹಿತ್ಯ' ಬೆಳೆಯತೊಡಗಿದರೂ, ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿ ನಿಜಾಮರ ಆಳ್ವಿಕೆಯಿಂದ ಉರ್ದುವಿನಲ್ಲಿ ಶಿಕ್ಷಣ ಪಡೆಯುತ್ತಿದ್ದರಿಂದ ಬ್ರಿಟಿಶ್ ವಸಾಹತು ಶಾಹಿಯ ಜ್ಞಾನವನ್ನು ಪಡೆಯಲು ಸಾಧ್ಯವಾಗಲಿಲ್ಲ. ಏಕೆಂದರೆ ನಿಜಾಮರ ಸಂಸ್ಥಾನದಲ್ಲಿ ಉರ್ದು ಆಡಳಿತ ಭಾಷೆಯಾದ ಕಾರಣ ಉರ್ದುವಿನಲ್ಲೇ ವ್ಯವಹಾರ ಮಾಡತೊಡಗಿದರು. ಕನ್ನಡ ಭಾಷಾಭಿಮಾನಿಗಳು ಸಾಹಿತ್ಯದಲ್ಲಿ ಆಸಕ್ತಿ ಹೊಂದಿ ಅದನ್ನು ಬೆಳೆಸುವುದಕ್ಕೆ ಸಮಯ ಬೇಕಾಯಿತು. ಇದರಿಂದ ಸಾಹಿತ್ಯದ ಬೆಳವಣಿಗೆ ಸಹಜವಾಗಿಯೇ ಕುಂಠಿತವಾಯಿತು. ಆದರೆ ತತ್ವಪದಕಾರರು ಕಾಲಿಡುತ್ತಿದ್ದ ಆಧುನಿಕತೆಯನ್ನು ಕುತೂಹಲದಿಂದಲೂ, ಆತಂಕದಿಂದಲೂ ಗಮನಿಸುತ್ತ ತಮ್ಮ

ತಲ್ಲಣಗಳನ್ನು ಹಾಡತೊಡಗಿದರು. ಇದರಿಂದಲೇ 20ನೇ ಶತಮಾನದ ಸಂವೇದನೆಯೂ ಮೌಖಿಕ ಸಾಹಿತ್ಯದಲ್ಲಿ ಮೂಡಿಬಂದಿದೆ. ರಾಷ್ಟ್ರೀಯವಾದ, ನಿರುದ್ಯೋಗ ಸಮಸ್ಯೆ, ವರದಕ್ಷಿಣೆ ಪಿಡುಗು, ಭ್ರಷ್ಟಾಚಾರ, ಹೋಟೆಲ್, ವಕೀಲ, ಕೋರ್ಟ್ ಮುಂತಾದವು ತತ್ವಪದ ಸಾಹಿತ್ಯದಲ್ಲಿ ಕುತೂಹಲಕಾರಿಯಾಗಿ ವ್ಯಕ್ತವಾಗಿವೆ. ಆಧುನಿಕತೆಯ ಅಂಶಗಳು ಕೂಡಲೂರು ಬಸಲಿಂಗಪ್ಪ, ಕಡಕೋಳ ಮಡಿವಾಳಪ್ಪ, ವಡಕಿ ತಾತಪ್ಪ, ನಿಜಲಿಂಗ ಭದ್ರೇಶ್ವರ, ಶಿಲ್ಲಪ್ಪ ಮುಂತಾದ ತತ್ವಪದಕಾರರ ತತ್ವಪದಗಳಲ್ಲಿ ಆಧುನಿಕತೆ ಉಂಟುಮಾಡಿದ ಬಿಕ್ಕಟ್ಟುಗಳು, ಆಧುನಿಕ ಸಂವೇದನೆಗಳು ತತ್ವಪದಗಳಲ್ಲಿ ವ್ಯಕ್ತವಾಗಿವೆ. ನ್ಯಾಯವನ್ನು ದೊರಕಿಸಿಕೊಡುವ ವಕೀಲನ ಮೇಲೆ ವಡಕಿ ತಾತಪ್ಪ ರಚಿಸಿರುವ ತತ್ವಪದ–

**‘‘ವಕೀಲ ಬಂದನೆ ನೋಡು**
**ಪರಬ್ರಹ್ಮ ವಕೀಲ ಬಂದನೆ ನೋಡು**
**ಅಖಿಲ ಬ್ರಹ್ಮಾಂಡ ಕಾಯ್ದವ ಶೀಲ ಮಾಹಿತಿ ತಿಳಿದವ**
**ಧೀರನಾದ ವಕೀಲ ಬಂದನೆ ನೋಡು**
**ಕಾಮ ಕ್ರೋಧ ಲೋಭ ಮೋಹ**
**ಮದ-ಮತ್ಸರಗಳ ಖಟ್ಟೆ ಬಗೆಹರಿಸುವ’’**[4]

ವಡಿಕಿ ತಾತಪ್ಪನ ಈ ತತ್ವಪದವು ಭಾರತಕ್ಕೆ ಆಗಮಿಸಿದ ಹೊಸ ನ್ಯಾಯಾಂಗ ವ್ಯವಸ್ಥೆಯ ಕುರಿತಾಗಿದೆ. ಇಲ್ಲಿ ವಕೀಲ ವೃತ್ತಿಯನ್ನು ಒಂದು ಉಪಮೆಯಾಗಿ ಬಳಸಿ, ಅದನ್ನು ಆಧ್ಯಾತ್ಮಿಕ ಸಾಧಕನಿಗೆ ಹೋಲಿಸಲಾಗಿದೆ. ಒಬ್ಬ ಆಧ್ಯಾತ್ಮಿಕ ಸಾಧಕನು ಜ್ಞಾನವನ್ನು ಹೇಗೆ ಸಂಪಾದಿಸಬೇಕೆಂದು ತಿಳಿದಿರುವಂತೆಯೇ, ವಕೀಲನು ನ್ಯಾಯಾಲಯದಲ್ಲಿ ಏನು ಹೇಳಬೇಕು ಮತ್ತು ತನ್ನ ಕಕ್ಷಿದಾರನನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಮೊದಲೇ ಅರಿತಿರುತ್ತಾನೆ. ಈ ಆಧ್ಯಾತ್ಮಿಕ ವಕೀಲನು ಎಲ್ಲಾ ಜೀವಿಗಳನ್ನು ಮತ್ತು ಇಡೀ ಜಗತ್ತನ್ನು ರಕ್ಷಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಅರಿಷಡ್ವರ್ಗಗಳೆಂಬ ವ್ಯಾಜ್ಯಗಳನ್ನು ಪರಿಹರಿಸುವ ಧೈರ್ಯ ಅವನಲ್ಲಿದೆ. ಜ್ಞಾನವೆಂಬ ಕಾನೂನನ್ನು ಹಿಡಿದು ಈ ಲೋಕದ ನ್ಯಾಯಾಲಯದಲ್ಲಿ ತನ್ನ ವಾದವನ್ನು ಮಂಡಿಸುತ್ತಾನೆ. ನೀತಿ, ಅನೀತಿ, ಸರಿ, ತಪ್ಪುಗಳನ್ನು ಪರಿಶೀಲಿಸಿ ಸತ್ಯಕ್ಕೆ ಜಯ ಸಿಗುವಂತೆ ಮಾಡುತ್ತಾನೆ. ಈ ಸಾಧಕನನ್ನು ಪರಬ್ರಹ್ಮ ಸ್ವರೂಪಿಯಾದ ವಕೀಲನೆಂದು ಕರೆಯಲಾಗಿದೆ ಮತ್ತು ಅವನು ಎಲ್ಲಾ ಬಗೆಯ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ಶಕ್ತಿಯನ್ನು ಹೊಂದಿದ್ದಾನೆ.

ಬ್ರಿಟಿಷರು ತಂದ ಹೋಟೆಲ್ ವ್ಯವಸ್ಥೆಯನ್ನು ಕುರಿತು ವಡಕಿ ತಾತಪ್ಪ ಹೀಗೆ ಹೇಳುತ್ತಾನೆ:

**‘‘ಹೋಟಲ್ ಎಂದು ಓಡ್ಯಾಡಿ ಹೊಕ್ಕಿ**
**ಗಳಿಸಿದರೊಕ್ಕದರೊಳಗಿಕ್ಕಿ**
**ಹೆಂಡರು ಮಕ್ಕಳು ಮಣ್ಣು ಮುಕ್ಕಿ**

**ಹೊಲಮನ ಕಳಕೊಂಡಾಡಿಯೋ ಪಿಕ್ಕಿ"[5]**

'ಹೋಟೆಲ್' ಆಧುನಿಕತೆಯ ಸಂಕೇತ. ಹಳ್ಳಿಗಳಿಗೆ ಹೋಟೆಲ್ಗಳು ಪ್ರವೇಶಿಸುವುದು ಎಂದರೆ ಆಧುನಿಕತೆ ಪ್ರವೇಶಿಸಿದಂತೆ. ಇದರಿಂದ ಮೇಲ್ವರ್ಗದವರು ಮತ್ತು ಕೆಳವರ್ಗದವರು ಒಟ್ಟಿಗೆ ಕುಳಿತು ಹೋಟೆಲ್ಗಳಲ್ಲಿ ತಿನ್ನಲು ಮತ್ತು ಕುಡಿಯಲು ಪ್ರಾರಂಭಿಸಿದರು. ಮೇಲು-ಕೀಳು ಎಂಬುದನ್ನು ನಿರಾಕರಿಸುವ ಸ್ಥಿತಿಯನ್ನು ಹೋಟೆಲ್ ನಿರ್ಮಿಸಿತು ಎಂಬುದು ನಿಜ. ಆದರೆ ದುಡಿದು ತಿನ್ನುವ ಜನಸಾಮಾನ್ಯರು ಹೋಟೆಲ್ ತಿಂಡಿ-ತಿನಿಸುಗಳಿಗೆ ಮರುಳಾಗಿ ತಾವು ದುಡಿದ ಹಣವನ್ನು ಈ ಹೋಟೆಲ್ಗಳಿಗೆ ಸುರಿದು ಸಂಸಾರಕ್ಕೆ ತೊಂದರೆ ತಂದಿರುವುದು, ಹೆಂಡತಿ ಮಕ್ಕಳಿಗೆ ಅನ್ನವಿಲ್ಲದಂತೆ ಮಾಡಿರುವುದು ಮತ್ತು ಈ ಹೋಟೆಲ್ ಚಟದಿಂದಾಗಿ ಇದ್ದ ಅಲ್ಪಸ್ವಲ್ಪ ಭೂಮಿಯನ್ನು ಕಳೆದುಕೊಂಡಿರುವವರ ಸ್ಥಿತಿಯನ್ನು ನೋಡಿದ ವಡಕಿ ತಾತಪ್ಪಯ್ಯನವರಿಗೆ ಹೋಟೆಲ್ ಒಂದು ವಿನಾಶಕಾರಿ ವ್ಯವಸ್ಥೆಯಾಗಿ ಕಂಡಿದೆ.

ಬ್ರಿಟಿಷರು ಭಾರತಕ್ಕೆ ಪರಿಚಯಿಸಿದ ಹೊಸ ಆರ್ಥಿಕ ನೀತಿಗಳು ಭಾರತೀಯರ ವಾಣಿಜ್ಯೀಕರಣಕ್ಕೆ ವಿರುದ್ಧವಾಗಿದ್ದವು. ಭಾರತದ ಸಾಂಪ್ರದಾಯಿಕ ಕೈಗಾರಿಕೆ ಮತ್ತು ಕರಕುಶಲ ಕಲೆಗಳನ್ನು ಮೂಲೆಗುಂಪು ಮಾಡಿದಲ್ಲದೆ ಭಾರತದ ಬೆಲೆಬಾಳುವ ವಸ್ತುಗಳನ್ನು ರಫ್ತು ಮಾಡಿ ಸಿದ್ಧ ವಸ್ತುಗಳನ್ನು ಆಮದು ಮಾಡಿಕೊಳ್ಳುವಲ್ಲಿ ಹೆಚ್ಚು ಪ್ರೋತ್ಸಾಹ ನೀಡಿದರು. ಬ್ರಿಟಿಷರು ಭಾರತದ ಕಚ್ಚಾ ವಸ್ತುಗಳಿಗೆ ಕಡಿಮೆ ಬೆಲೆಕೊಟ್ಟು ಖರೀದಿಸಿ ಇಂಗ್ಲೆಂಡಿನ ಕೈಗಾರಿಕೆಗಳಲ್ಲಿ ಸಿದ್ಧವಾದ ವಸ್ತುಗಳಿಗೆ ಭಾರತದಲ್ಲಿ ಹೆಚ್ಚಿನ ಬೆಲೆಗೆ ಮಾರಿದರು. ಈ ತಂತ್ರದಿಂದಾಗಿ ಗ್ರಾಮೀಣ ಗುಡಿ ಕೈಗಾರಿಕೆಗಳು ನಾಶವಾದವು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಶರೀಫರು-

**"ಸೂಜಿಯೇ ನೀನು ಸೂಜಿಯೇ ಈ**
**ರಾಜ್ಯದೊಳಗೆಲ್ಲ ತೇಜ ಕಾಣಿಸುವಂಥ**
**ತಂಪಾದ ಉಕ್ಕಿನೊಳು ಹುಟ್ಟಿದ ಸೂಜಿಯೇ**
**ಸಿಂಪಿಗರಗಣ್ಣಿಗೆ ಬಲವಾದ ಸೂಜಿಯೇ**
**ಇಂಪುಳ್ಳ ದಾರಕೆ ಸೊಂಪುಗೂಡಿಸುವಂಥ**
**ಕಂಪನಿ ಸರಕಾರ ವಶವಾದ ಸೂಜಿಯೇ"[6]**

ಎಂಬ ಪದದ ಮೂಲಕ ಹಾಡಿದ್ದಾರೆ. ಇಂಗ್ಲೆಂಡ್ ದೇಶದ ಸಿದ್ಧ ಉಡುಪುಗಳು ಭಾರತದಲ್ಲಿ ಭಾರಿ ಪ್ರಮಾಣದಲ್ಲಿ ಮಾರಾಟವಾಗಿ ಹೆಚ್ಚು ಲಾಭ ಗಳಿಸಬೇಕೆಂಬ ದುರುದ್ದೇಶದಿಂದ, ದೇಶಿ ಉಡುಪುಗಳ ಬೆಲೆ ಇಳಿಸುವ ಮೂಲಕ ಸಿದ್ಧ ಉಡುಪುಗಳ ಉದ್ಯೋಗ ಆಂಗ್ಲರ ವಶವಾದುದನ್ನು ಸೂಜಿಯನ್ನು ಸಂಕೇತವನ್ನಾಗಿ ಬಳಸಿಕೊಂಡು ಅಂದಿನ ರಾಜಕೀಯ ಸ್ಥಿತಿಯನ್ನು ಈ ಪದದಲ್ಲಿ ಶರೀಫರು ಹೇಳಿದ್ದಾರೆ.

**"ಸಾಲೆಯ ನೋಡಿದಿಯಾ ಸರಕಾರದ**
**ಸಾಲೆಯ ನೋಡಿದಿಯಾ**

**ಸಾಲೆ ಸದ್ಗುರುವಿನ ಮಹಲು ಮಂಟಪವಿದು**
**ಮೇಲು ಕಾಣಿಸುತದ ಭೂಲೋಕದೊಳು"[7]**

ಭಾರತದಲ್ಲಿ ಹಿಂದೆ ಗುರುಕುಲ ಮಾದರಿಯ ಶಿಕ್ಷಣ ಇತ್ತು. ನಂತರ ಕೂಲಿ ಮಠಗಳು ಮತ್ತು ಅಯ್ಯನವರ ಪಾಠಶಾಲೆಗಳು ಆರಂಭವಾದವು. ಈ ಶಿಕ್ಷಣ ಕೆಲವೇ ಜನರಿಗೆ ಲಭ್ಯವಿತ್ತು. ಆದರೆ ಬ್ರಿಟಿಷ್ ಸರ್ಕಾರ ಜಾರಿಗೆ ತಂದ ಹೊಸ ಇಂಗ್ಲಿಷ್ ಶಿಕ್ಷಣವು ಎಲ್ಲ ವರ್ಗದ ಜನರಿಗೂ ಅವಕಾಶ ನೀಡಿತು. ವೇದ, ಉಪನಿಷತ್ತು, ಪುರಾಣ, ರಾಮಾಯಣ, ಮಹಾಭಾರತಗಳಂತಹ ಶಾಸ್ತ್ರ ವಿಷಯಗಳ ಬದಲು ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಯಿತು. ಶಿಕ್ಷಣದ ಈ ವಿಸ್ತರಣೆಯನ್ನು ಶರೀಫರು ಆಶ್ಚರ್ಯದಿಂದ ನೋಡಿದರು ಮತ್ತು ಅದನ್ನು ಸ್ವಾಗತಿಸಿದರು. ಅವರು ತಮ್ಮ ತತ್ವಪದಗಳ ಮೂಲಕ ಅದರ ಮಹತ್ವವನ್ನು ವ್ಯಕ್ತಪಡಿಸಿದರು. ಶರೀಫರ ಕಲ್ಪನೆಯ ಶಾಲೆಯು ಜ್ಞಾನವನ್ನು ಹಂಚುವ ಪವಿತ್ರ ಸ್ಥಳವಾಗಿದೆ. ಶಿಶುನಾಳದ ಪಕ್ಕದ ಊರಾದ ಗುಡಿಗೇರಿಯಲ್ಲಿ ಹೊಸದಾಗಿ ಪ್ರಾರಂಭವಾದ ಶಾಲೆಯ ಕಾರ್ಯಕ್ರಮಗಳು ಶರೀಫರನ್ನು ಆಕರ್ಷಿಸಿದವು. ಈ ಹೊಸ ಶಿಕ್ಷಣ ಪದ್ಧತಿಯಿಂದ ಅಜ್ಞಾನ ಮತ್ತು ಮೂಢನಂಬಿಕೆಗಳು ನಾಶವಾಗಿ ಜನರಲ್ಲಿ ಜಾಗೃತಿ ಮೂಡಿತು ಎಂಬ ಆಶಯವನ್ನು ಈ ತತ್ವಪದದಲ್ಲಿ ವ್ಯಕ್ತಪಡಿಸಿದ್ದಾರೆ.

"ಬಂಡಿ ಹೊಡೆಯುವವರೆಲ್ಲ ಹುಂಡ್ಯಾ ಬೇಡುವವರಲ್ಲ ಎಂದು ವರದಕ್ಷಿಣೆಯ ಪಿಡುಗಿನ ಬಗ್ಗೆ ಶಿಲ್ಲಪ್ಪ ಹಾಡಿದ್ದಾರೆ. 'ಮನಿಯ ಹೊಲವ ಮಾರಾಟ ಮಾಡಿ ಮಗಳಿಗೆ ಕೊಟ್ಟು ಮದುವಿಯ ಮಾಡಿ ಇನ್ನೇನು ಉಳಿಯಲಿಲ್ಲ ಭಿಕ್ಷಾ ಬೇಡೋದೆ ಬಂತು' ಎಂದು ಹೆಣ್ಣು ಹೆತ್ತವರ ಬಗ್ಗೆ ವ್ಯಥೆಪಟ್ಟಿದ್ದಾನೆ. 'ಕೊಡುವುದು ತೊಗೊಳ್ಳದು ಖಂಡಿತ ಬಿಡ್ರಿ ವರವಿದ್ದರೆ ಕುಲ ಎಣಿಸ್ಯಾಡಬೇಡ್ರಿ' ಎಂದು ಸೂಚಿಸಿದ್ದಾನೆ. ಜನಸಂಖ್ಯೆ, ನಿರುದ್ಯೋಗ, ಅದರಿಂದುಂಟಾಗುವ ಸಾಮಾಜಿಕ ಸಮಸ್ಯೆಗಳು, ಕುಟುಂಬ ಯೋಜನೆ, ಪಟ್ಟಣದ ಮೋಹ ಮುಂತಾದ ಆಧುನಿಕ ಕಾಲದ ಅನೇಕ ಸಮಸ್ಯೆಗಳು ಈ ಅನುಭಾವಿಯನ್ನು ಕಾಡಿವೆ."[8]

**"ಹಿಪ್ಪಿ ಕಟಿಂಗ್ ಕೂದಲ ಬಿಟ್ಟ**
**ಬೆಲ್ ಬಾಟಮ್ ಪ್ಯಾಂಟ ತೊಟ್ಟ**
**ದಂದಿ ಅಗಲದಕ ಕಳುವಿಗಿ ಹೊಂಟ**
**ಏರಿದ ರೈಲುಗಾಡಿ ॥ಪ॥**
**ರೇಜರ್ ಉಗುರೀಲಿ ಕಿಸೆ ಮಾಡಿಕಟ್ಟಿ**
**ರೂಪಾಯಿ ಸಿಕ್ಕು ನೂರಾ ಎಂಟಾ**
**ಅವರಿವರದಾಗ ಹೂಡಿತೋ ತಂಟಾ**
**ನಡಿತೊ ಹೂಡಿಕಡಿ ॥1॥**
**ಪೋಲೀಸ್ ಸಿ.ಐ.ಡಿ ಹೇಳಿದ ಸ್ವಲಾ**
**ಹಿಡಿದು ಒಯ್ದು ಠಾಣಾದಾಗ ಕೊಟ್ಟಾ**

**ಬೆಳಗಾನ ಹೊಡದಾರ ಮುಖಕ್ಕಂಟ**
**ಕಳದಾನ ಸಾಬೀತಮಾಡಿ ॥2॥**
**ಅದರಾಗ ಇರತಾನ ಏಜಂಟ**
**ಹಿಡಿದಿದ್ದು ಸುದ್ದಿ ಕೇಳಿ ಹೊಂಟ**
**ಸಾವಿರ ರೂಪಾಯಿ ಲಂಚಾ ಕೊಟ್ಟ**
**ಮಾಡತ್ಯಾನ ಬಿಡುಗಡಿ ॥3॥**
**ಪೌಜುದಾರ, ಜಮಾದಾರ, ಪೋಲೀಸ್ ಒಟ್ಟ**
**ಅರ್ಧ ರೂಪಾಯಿ ಡಿ.ಎಸ್.ಪಿಗೆ ಕೊಟ್ಟ**
**ಅವರಿವರು ಕೂಡಿ ತಿಂದು ಬಿಟ್ಟಿ**
**ಇಂಥವರದೇ ನಡದಾದರಿ ಗಾಡಿ''[9]**

ಮಹಾಗಾಂವ ಮೀರಾಸಾಬನು ಆಧುನಿಕತೆಯಿಂದ ಬಂದಂತಹ ಉಡುಪುಗಳ ವಿನ್ಯಾಸ ಮತ್ತು ಕಾನೂನು ವ್ಯವಸ್ಥೆಯ ಬಗ್ಗೆ ಅಪನಂಬಿಕೆಯಿಂದ ತನ್ನ ಆತಂಕವನ್ನು ವ್ಯಕ್ತಪಡಿಸುತ್ತಾನೆ. ಆಧುನಿಕ ಆಡಳಿತ ವ್ಯವಸ್ಥೆಯ ನ್ಯೂನತೆಗಳನ್ನು ಮತ್ತು ಅಧಿಕಾರಿಗಳ ದುರಾಸೆಯನ್ನು ಅವನು ಚಿತ್ರಿಸಿದ್ದಾನೆ. ನಾಗರಿಕತೆಯ ಹೆಸರಿನಲ್ಲಿ ಬೆಳೆದು ಬಂದಿರುವ ಬಾಹ್ಯ ಆಡಂಬರಗಳು ಮನುಷ್ಯನ ನಿಜವಾದ ಆಂತರಿಕ ಗುಣಗಳನ್ನು ಮರೆಮಾಚುವಲ್ಲಿ ಮುಖ್ಯ ಪಾತ್ರ ವಹಿಸಿದವು. ಬಾಹ್ಯ ಸೌಂದರ್ಯದ ಮಿತಿಗಳನ್ನು ತಿಳಿಸಿ, ಆಂತರಿಕ ಸೌಂದರ್ಯದ ಮಹತ್ವವನ್ನು ತತ್ವಪದಕಾರರು ಒತ್ತಿ ಹೇಳಿದ್ದಾರೆ. ಯುವಕರು ದುಡಿದು ತಿನ್ನದೆ ಕಳ್ಳತನ ಮಾಡಿ ಜೀವನ ಸಾಗಿಸುವ ಮತ್ತು ಹಿಪ್ಪಿ ಕಟಿಂಗ್ ಮಾಡಿಕೊಂಡು, ಬೆಲ್‌ಬಾಟಮ್ ಪ್ಯಾಂಟ್ ಧರಿಸಿ ಸಭ್ಯಸ್ಥರಂತೆ ನಟಿಸಿ ರೈಲುಗಳಲ್ಲಿ ಕಳ್ಳತನ ಮಾಡಿ ಬದುಕಬೇಕಾದ ಪರಿಸ್ಥಿತಿ ಬಂದಿರುವುದು ದುಃಖಕರ ಸಂಗತಿಯಾಗಿದೆ. ಇದು ನಿರುದ್ಯೋಗದ ಸಮಸ್ಯೆಯನ್ನು ಸೂಚಿಸುತ್ತದೆ. ಕಳ್ಳತನ ಮಾಡುವ ಚಾತುರ್ಯವನ್ನು ಆಧುನಿಕತೆಯು ಅವರಿಗೆ ಕಲಿಸಿದೆ. ಕಳ್ಳತನ ಮಾಡಿ ಸಿಕ್ಕಿಬಿದ್ದಾಗ ಅವರು ಪೊಲೀಸ್, ಸಿ.ಐ.ಡಿ, ಫೌಜುದಾರ್, ಜಮಾದಾರ್ ಮತ್ತು ಡಿ.ಎಸ್.ಪಿ.ವರೆಗಿನ ಎಲ್ಲ ಅಧಿಕಾರಿಗಳಿಗೂ ಲಂಚ ನೀಡಿ ಬಿಡುಗಡೆಯಾಗುತ್ತಾರೆ. ಇದು ಆಡಳಿತ ವರ್ಗದ ಭ್ರಷ್ಟಾಚಾರವನ್ನು ಎತ್ತಿ ತೋರಿಸುತ್ತದೆ. ಯುವಕರನ್ನು ತಪ್ಪು ದಾರಿಗೆಳೆಯುತ್ತಿರುವ ಈ ಆಧುನಿಕತೆಯ ಬಗ್ಗೆ ತತ್ವಪದಕಾರರು ತಮ್ಮ ಕಳವಳವನ್ನು ವ್ಯಕ್ತಪಡಿಸುತ್ತಾರೆ.

ಹೀಗೆ ಅನೇಕ ತತ್ವಪದಕಾರರು ರಾಜಕೀಯವನ್ನು, ಆಧುನಿಕತೆಯನ್ನು, ಅದರ ಪರಿಣಾಮವನ್ನು ವಾಸ್ತವದ ನೆಲೆಯಲ್ಲಿ ನೋಡಿದರು. ನಗರಗಳ ವಾಣಿಜ್ಯ ವ್ಯವಹಾರ, ಹೊಸ ಕೈಗಾರಿಕೆಗಳು, ಸರಕಾರಿ ಶಾಲೆ, ರೈಲು, ಕಾಫಿ, ಟೀ, ಹೋಟೆಲ್‌ಗಳು ಮೊದಲಾದವುಗಳು ಕೈಗಾರೀಕರಣದ ಆಧುನಿಕತೆಯನ್ನು ತೋರಿಸಿದರೆ ಪ್ಲೇಗ್, ಕಾಲರಾ, ಯುದ್ಧಗಳು, ತೆರಿಗೆ ವಸೂಲಿ ಮೊದಲಾದ ವಿಷಯಗಳು ತತ್ವಪದಕಾರರ ಕಾಲಜ್ಞಾನವನ್ನು ತೋರಿಸುತ್ತವೆ. ಒಂದು ಕಡೆ ಆಧುನಿಕತೆ, ಇನ್ನೊಂದು ಕಡೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಗಾಢವಾಗಿ ವ್ಯಾಪಿಸುತ್ತಲೇ ರಾಜ್ಯದಲ್ಲಿ ತೀವ್ರ ಬಡತನ, ಕಷ್ಟ

ಕಾರ್ಪಣ್ಯ, ಬರಗಾಲ ಇವುಗಳ ಚಿತ್ರಣ ಅವರ ತತ್ವಪದಗಳಲ್ಲಿ ಕಂಡುಬರುತ್ತವೆ. ಆಧುನಿಕ ಸಮಾಜದಲ್ಲಿ ತತ್ವಪದಗಳು ಕೇವಲ ಭಕ್ತಿ ಮತ್ತು ತಾತ್ವಿಕ ವಿಚಾರಗಳನ್ನು ಮಾತ್ರವಲ್ಲದೆ, ಮೌಲ್ಯಮಾಪನ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಪ್ರೇರಕಶಕ್ತಿಯಾಗಿ ಮುಂದುವರಿಯುತ್ತಿವೆ. ತತ್ತ್ವಪದಗಳ ಮೂಲಕ ಜೀವನದ ನೈತಿಕ ಮೌಲ್ಯಗಳನ್ನು, ಸಹಜ ಶ್ರೇಣಿಭೇದ ವಿರೋಧವನ್ನು, ಸಮಾನತೆ ಮತ್ತು ಸತ್ಯಾಸತ್ಯತೆಯ ಪ್ರಭಾವವನ್ನು ವಿಶ್ಲೇಷಿಸಲು ಸಾಧ್ಯವಾಗಿದೆ. ನಾವು ಬಸವಣ್ಣನವರ, ಅಲ್ಲಮಪ್ರಭು, ಅಕ್ಕಮಹಾದೇವಿ ಹಾಗೂ ದಾಸಸಾಹಿತ್ಯದ ತತ್ವಪದಗಳನ್ನು ಆಧುನಿಕ ದೃಷ್ಟಿಕೋನದಿಂದ ನೋಡಿದರೆ, ಅವುಗಳು ತತ್ವಜ್ಞಾನ ಮತ್ತು ಸಾಮಾಜಿಕ ನಿಲುವುಗಳ ಹೊಸ ಅರ್ಥಗಳನ್ನು ನೀಡುತ್ತವೆ. ಉದಾಹರಣೆಗೆ, ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ತತ್ವಪದ ಇಂದು ಉದ್ಯೋಗನೀತಿ, ಶ್ರಮದ ಗೌರವ, ಮತ್ತು ಆರ್ಥಿಕ ಸ್ವಾವಲಂಬನೆಯ ತತ್ವವಾಗಿ ವ್ಯಾಖ್ಯಾನಿಸಲಾಗುತ್ತಿದೆ. ಆಧುನಿಕ ಕಾಲಘಟ್ಟದಲ್ಲಿ ತಂತ್ರಜ್ಞಾನ, ಮಾಧ್ಯಮ ಮತ್ತು ಸಾಮಾಜಿಕ ಚಿಂತನೆಗಳಲ್ಲಿ ಆದ ಬದಲಾವಣೆಗಳು ತತ್ವಪದಗಳ ಮೇಲೂ ಪರಿಣಾಮ ಬೀರಿವೆ. ಆದರೂ ಅವು ತಮ್ಮ ಮೂಲ ಸತ್ವವನ್ನು ಉಳಿಸಿಕೊಂಡು ಹೊಸ ಆಯಾಮಗಳನ್ನು ಪಡೆದುಕೊಂಡಿವೆ.

**ಕೊನೆಯ ಟಿಪ್ಪಣಿಗಳು:**


1. ಬಸವರಾಜ ಸಬರದ (ಸಂ), (2000), ಹೈದ್ರಾಬಾದ್ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. VII
2. ಅದೇ, ಪು.ಸಂ. 03
3. ಶಿವಾನಂದ ಗುಬ್ಬಣ್ಣವರ (ಸಂ), (2002), ಶಿಶುನಾಳ ಶರೀಫರ ಗೀತೆಗಳು, ಅಕ್ಷರ ಪ್ರಕಾಶನ, ಧಾರವಾಡ, ಪು.ಸಂ. 14
4. ಬಸವರಾಜ ಸಬರದ (ಸಂ), (2000), ಹೈದ್ರಾಬಾದ್ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 223
5. ಚಿಲ್ಕರಾಗಿ ಸಿ.ಬಿ., (2012), ನೂರೆಂಟು ನಾಯಿ ಬೊಗಳಿದರೇನು, ಅದಿತಿ ಪ್ರಕಾಶನ, ರಾಯಚೂರು, ಪು.ಸಂ. 113
6. ಶಿವಾನಂದ ಗುಬ್ಬಣ್ಣವರ (ಸಂ), (2002), ಶಿಶುನಾಳ ಶರೀಫರ ಗೀತೆಗಳು, ಅಕ್ಷರ ಪ್ರಕಾಶನ, ಧಾರವಾಡ, ಪು.ಸಂ. 155
7. ಅದೇ, ಪು.ಸಂ. 162
8. ಅಮರೇಶ ನುಗಡೋಣಿ, (1999), ನುಡಿವ ಬೆಡಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 66
9. ಭಾಸ್ಕರ್ ಟಿ.ಎಂ. (ಸಂ), (2001), ಮಹಾಗಾಂವ ಮೀರಾಸಾಬ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.ಸಂ. 51

**ಪರಾಮರ್ಶನ ಗ್ರಂಥಗಳು:**


1. ರಹಮತ್ ತರೀಕೆರೆ, (2017), ತತ್ವಪದ ಪ್ರವೇಶಿಕೆ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.
2. ವಿಜಯಶ್ರೀ ಸಬರದ, (1997), ಗುರು ಶಿಷ್ಯರ ತತ್ವಪದಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
3. ಆನಂದಮೂರ್ತಿ ಜಿ.ವಿ., (1998,) ತತ್ವಪದಕಾರರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
4. ಅಮರೇಶ ನುಗಡೋಣಿ, (2017), ತತ್ವಪದ ಸಾಹಿತ್ಯ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಬಸವರಾಜ ಸಬರದ (ಸಂ), (2000), ಹೈದ್ರಾಬಾದ್ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಶಿವಾನಂದ ಗುಬ್ಬಣ್ಣವರ (ಸಂ), (2002), ಶಿಶುನಾಳ ಶರೀಫರ ಗೀತೆಗಳು, ಅಕ್ಷರ ಪ್ರಕಾಶನ, ಧಾರವಾಡ.
7. ಚಿಲ್ಕರಾಗಿ ಸಿ.ಬಿ., (2012), ನೂರೆಂಟು ನಾಯಿ ಬೊಗಳಿದರೇನು, ಅದಿತಿ ಪ್ರಕಾಶನ, ರಾಯಚೂರು.
8. ಅಮರೇಶ ನುಗಡೋಣಿ, (1999), ನುಡಿವ ಬೆಡಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ಭಾಸ್ಕರ್ ಟಿ.ಎಂ. (ಸಂ), (2001), ಮಹಾಗಾಂವ ಮೀರಾಸಾಬ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.